ನೇತ್ರಾವತಿ ತಿರುವು ಯೋಜನೆ

409 (679) ಶ್ರೀ ರಾಜು ಕೆ. (ರಾಮನಗರ) :- ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಮನಗರ ಜಿಲ್ಲೆಯ ನೇತ್ರಾವತಿ ತಿರುವು ಯೋಜನೆಯಿಂದ ಮಂಚನಬೆಲೆ ಡ್ಯಾಂಗೆ ನೀರು ತಂದು ರಾಮನಗರ ಮತ್ತು ಮಾಗಡಿ ತಾಲ್ಲೂಕಿಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಎಂದಿನಿಂದ ಜಾರಿಗೊಳಿಸಲಾಗುವುದು (ಮಾಹಿತಿ ನೀಡುವುದು) ?

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು):-

ಅ) ನೇತ್ರಾವತಿ ನದಿಯನ್ನು ತಿರುವುಗೊಳಿಸಿ ಯೋಜನೆಯಿಂದ ಮಂಚನಬೆಲೆ ಡ್ಯಾಂಗೆ ನೀರು ತಂದು ರಾಮನಗರ ಮತ್ತು ಮಾಗಡಿ ತಾಲ್ಲೂಕಿಗೆ ಕುಡಿಯುವ ನೀರನ್ನು ಒದಗಿಸುವ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ. ಆದರೆ, ಈಗ ಶ್ರೀ ಜಿ.ಎಸ್. ಪರಮಶಿವಯ್ಯನವರ ವರದಿಯಂತೆ ಪಶ್ಚಿಮಾಭಿಮುಖವಾಗಿ ಹರಿಯುವ ಕೆಲವೊಂದು ಉಪನದಿಗಳ ಮರುಪೂರಣದ ನೀರನ್ನು ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ, ಕೆರೆಗಳನ್ನು ತುಂಬಿ ಅಂತರ್ಜಲ ವೃದ್ಧಿ ಮಾಡಲು ಯೋಜನೆಯನ್ನು ಪ್ರಸ್ತಾಪಿಸಿರುತ್ತಾರೆ. ಈ ಅಧ್ಯಯನವನ್ನು ಮುಂದುವರೆಸುತ್ತಾ, ಪಶ್ಚಿಮದಲ್ಲಿ ಹರಿಯುತ್ತಿರುವ ನದಿಗಳ ತಿರುವು ಯೋಜನೆ ತಯಾರಿಕೆ ಕುರಿತು ಸರ್ವೆ ಕಾರ್ಯ ಮತ್ತು ವಿವರವಾದ ಯೋಜನಾ ವರದಿ ತಯಾರಿಕೆ ಹಾಗೂ ತಾಂತ್ರಿಕ ಶಕ್ಯತಾ ಅಧ್ಯಯನ ಕುರಿತು ಸರ್ವೆ ಕಾರ್ಯ ಕೈಗೊಳ್ಳಲು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಡಿ ದಿನಾಂಕ : 02-12-2011 ರಂದು ಟೆಂಡರ್ ಆಹ್ವಾನಿಸಿ ಅಧಿಸೂಚನೆ ಹೊರಡಿಸಿದೆ. ಈ ವಿವರವಾದ ಯೋಜನಾ ವರದಿಯನ್ನು ತಯಾರಿಸಿದ ನಂತರ, ಯಾವ ಪ್ರದೇಶಗಳಿಗೆ ಅಥವಾ ಜಲಾಶಯಗಳಿಗೆ, ಕೆರೆಗಳಿಗೆ ನೀರನ್ನು ಹರಿಸಲಾಗುವುದು ಎಂಬ ವಿವರಗಳು ಲಭ್ಯವಾಗುವುದು.

ಆ) ಸದರಿ ಯೋಜನಾ ವರದಿಯನ್ನು ತಯಾರಿಸಿದ ನಂತರ ಅದರ ಸಾಧಕ-ಬಾಧಕಗಳನ್ನು ಪರಿಗಣಿಸಿ ಕಾರ್ಯ ಸಾಧ್ಯತೆ ಬಗ್ಗೆ ಪರಿಶೀಲಿಸಬೇಕಾಗುತ್ತದೆ.